(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು,**

**(ಮಮ್ತಾಜ್)**
9 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು,
ಬೆಂಗಳೂರು.

ದಿನಾಂಕ **25.10.2024** ರಂದು ಅಪರಾಹ್ನ ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು**.**

ಪಾಟಿ ಸವಾಲು **: 2** ನೇ ಪ್ರತಿವಾದಿ ಪರ ಶ್ರೀ**.** ಎಸ್**.**ವಿ**.**ಎನ್ ವಕೀಲರಿಂದ ಃ

12. ನನ್ನ ತಂದೆಗೆ ಸಂಬಂಧಿಸಿದ ಒಂದು ಬಂಗಾರದ ಸರ ಮತ್ತು 2 ಉಂಗುರಗಳು ನನ್ನ ಬಳಿ ಇವೆ ಎಂದರೆ ಸರಿಯಲ್ಲ. ನನ್ನ ತಾಯಿಯ ಮಾಂಗಲ್ಯ ನನ್ನ ಬಳಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದನ್ನು ನನ್ನ ತಂದೆ ನನಗೆ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

13. ಆನೆಕಲ್ಲಿನಲ್ಲಿರುವ ಜಮೀನುಗಳಿಗೆ ಸಂಬಂಧಿಸಿ ಈ ದಾವೆಯ ತಪಸೀಲಿನಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದನ್ನು ನನ್ನ ವಾದ ಪತ್ರದಲ್ಲಿ ನಮೂದಿಸಿದ್ದು ಆ ಜಮೀನುಗಳು ಆನೆಕಲ್ಲಿನಲ್ಲಿರುವ ಆನೆಕಲ್ಲು ನ್ಯಾಯಾಲಯದಲ್ಲಿ ಜಮೀನಿನ ಪ್ರಕರಣಗಳು ನಡೆಯುತ್ತಿವೆ ಎಂದು ನುಡಿಯುತ್ತಾರೆ. ಆನೇಕಲ್ಲು ನ್ಯಾಯಾಲಯದಲ್ಲಿ ಪ್ರಕರಣಗಳು ನಡೆಯುತ್ತಿವೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ.

14. ನನ್ನ ತಂದೆಗೆ ಸೇರಿದ ಆರ್.ಡಿ ಮತ್ತು ಎಸ್.ಬಿ ಖಾತೆಗಳ ಬಗ್ಗೆ ನಮೂಂದು ಮಾಡಿಲ್ಲ ಎಂದರೆ ಸರಿ. ಆನೆಕಲ್ಲಿನಲ್ಲಿರುವ ಜಮೀನನ್ನು ಬಾಡಿಗೆಗೆ ಬಿಟ್ಟಿರುತ್ತೇನೆ. ಅದನ್ನು ಕಳೆದ 2 ತಿಂಗಳಿನಿಂದ ಬಾಡಿಗೆಗೆ ಬಿಟ್ಟಿರುತ್ತೇವೆ. ಸಾಕ್ಷಿ ಮುಂದುವರಿದು ಆನೆಕಲ್ಲಿನ ದಾವೆಯ ನಮ್ಮ ಪರವಾಗಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಬಾಡಿಗೆದಾರರ ಹೆಸರು ನನಗೆ ಗೊತ್ತಿಲ್ಲ. ಅದರಲ್ಲಿ ಮನೋರಂಜನೆಗೆ ಬಿಟ್ಟಿದ್ದು ಅಲ್ಲಿ ತಿರುಗುವ ಬಂಡಿಗಳು ಮತ್ತು ಮಕ್ಕಳು ಆಡುವಂತಹ ಆಟದ ಪರಿಕರಗಳು ಮತ್ತು ಫುಡ್ ಕೋರ್ಟ್ಗಳು ಇವೆ. ಬಾಡಿಗೆದಾರರ ಜೊತೆ ನಾವು ಕರಾರು ಪತ್ರವನ್ನು ಮಾಡಿಕೊಂಡಿರುತ್ತೇವೆ. ಆ ಕರಾರು ಪತ್ರದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಯಾವುದೇ

ಅಭ್ಯಂತರವಿಲ್ಲ. ಅದಕ್ಕೆ ಎಷ್ಟು ಬಾಡಿಗೆ ಬರುತ್ತದೆ ಎಂದು ನನ್ನ ದೊಡ್ಡ ಅಕ್ಕನಿಗೆ ಗೊತ್ತಿದೆ ನನಗೆ ಗೊತ್ತಿಲ್ಲ. ಆ ಕರಾರು ಪತ್ರಕ್ಕೆ ನಾವೆಲ್ಲರೂ ಮತ್ತು ಮೊದಲನೇ ಪ್ರತಿವಾದಿ ನನ್ನ ದೊಡ್ಡ ಅಣ್ಣ ಸಹಿ ಮಾಡಿರುತ್ತಾರೆ. ಬಾಡಿಗೆಯನ್ನು ನಾವು ಹಂಚಿಕೊಂಡಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದನ್ನು ಹಾಗೆಯೇ ಬ್ಯಾಂಕಿನಲ್ಲಿ ಇಟ್ಟಿರಬಹುದು. 2 ನೇ ಪ್ರತಿವಾದಿಯವರ ಗಮನಕ್ಕೆ ಬಾರದೆ ಈ ಮೇಲಿನಂತೆ ನಾವು ಬಾಡಿಗೆಗೆ ಇಟ್ಟಿದ್ದೇವೆ ಎಂದರೆ ಆತನ ಗಮನಕ್ಕೆ ಬಂದಿದೆ ಆದರೆ ಆತ ಎಲ್ಲದಕ್ಕೂ ಜಗಳ ಮಾಡುತ್ತಿರುತ್ತಾರೆ ಎಂದು ನುಡಿಯುತ್ತಾರೆ.

15. ಬಾಡಿಗೆ ಕರಾರು ಪತ್ರವನ್ನು ಮಾಡುವ ಮೊದಲು 2 ನೇ ಪ್ರತಿವಾದಿಯವರಿಗೆ ನೋಟೀಸು ನೀಡಿದ್ದೇವೋ ಇಲ್ಲವೋ ನನಗೆ ಗೊತ್ತಿಲ್ಲ. ನಾವು ಈ ದಾವೆಯನ್ನು ಹೂಡಿದ ನಂತರದಿಂದ ಅಂದರೆ 2019 ರ ನಂತರದಿಂದ ಆನೆಕಲ್ಲಿನ ಸ್ವತ್ತನ್ನು ಬಾಡಿಗೆಗೆ ನೀಡಿ ನಾವುಗಳು ಮಾತ್ರ ಬಾಡಿಗೆಯನ್ನು ಹಂಚಿಕೊಂಡು ಅನುಭವಿಸಿಕೊಂಡು ಬರುತ್ತಿದ್ದೇವೆ ಎಂದರೆ ಸರಿಯಲ್ಲ.

16. ವಾದ ಪತ್ರದ ಸ್ವತ್ತು ನನ್ನ ತಂದೆಯ ಹೆಸರಿಗೆ ಯಾವಾಗಿನಿಂದ ಬಂದಿದೆ ಎಂದು ನನಗೆ ಗೊತ್ತಿಲ್ಲ. ನಾವು ಹುಟ್ಟಿದಾಗಿನಿಂದ ಅಲ್ಲಿಯೇ ಇದ್ದೇವೆ.

17. ನನ್ನ ತಂದೆಯವರು ಜೀವಂತವಾಗಿದ್ದಾಗ ವಿಧಾನಸೌಧದಲ್ಲಿ ಜವಾನರಾಗಿದ್ದರು. ವಾದ ಪತ್ರದ ಸ್ವತ್ತನ್ನು ಖರೀದಿಸುವಾಗ ನನ್ನ ತಂದೆಯವರು ಸರ್ಕಾರಿ ನೌಕರರಾಗಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ಆನೆಕಲ್ಲಿನ ಸ್ವತ್ತಿನ ಆದಾಯದಿಂದ ವಾದ ಪತ್ರದ ಸ್ವತ್ತನ್ನು ಖರೀದಿಸಿದ್ದಾರೆ ಎಂದರೆ ನನಗೆ ಆ ಬಗ್ಗೆ ಗೊತ್ತಿಲ್ಲ. ನನ್ನ ತಂದೆಯವರು ವಾದ ಪತ್ರದ ಸ್ವತ್ತನ್ನು ಖರೀದಿಸುವಾಗ ಅದು ಖಾಲಿ ನಿವೇಶನವಾಗಿತ್ತು. ಮೊದಲು ನೆಲ ಮಹಡಿಯು ಇದ್ದು ಸ್ವಲ್ಪ ವರ್ಷಗಳ ನಂತರ ಮೊದಲನೇ ಮಹಡಿಯನ್ನು ಕಟ್ಟಿಸಿದ್ದಾರೆ ಎಂದರೆ ಸರಿ. ಈ ಮನೆಯನ್ನು ಕಟ್ಟುವ ಸಂದರ್ಭದಲ್ಲಿ 2 ನೇ ಪ್ರತಿವಾದಿಯವರು ಸಹ ಹಣವನ್ನು ನೀಡಿದ್ದಾರೆ ಎಂದರೆ ಸರಿಯಲ್ಲ.

18. ವಾದ ಪತ್ರದ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತವಾಗಿದ್ದಾಗ ನಾನು, ನನ್ನ ತಂದೆ ಮತ್ತು 2 ನೇ ಪ್ರತಿವಾದಿ ಮತ್ತು ಕುಟುಂಬದೊಂದಿಗೆ ನೆಲಮಹಡಿಯಲ್ಲಿ ವಾಸಿಸುತ್ತಿದ್ದೆವು ಎಂದರೆ ಸರಿ. ನನ್ನ ತಂದೆಯವರಿಗೆ ಗ್ಯಾಂಗ್ರೀನ್ ಆಗಿದ್ದರಿಂದ 2 ಕಾಲುಗಳನ್ನು ಕತ್ತರಿಸಲಾಗಿತ್ತು ಎಂದರೆ ಸರಿ. ಅವರು ಸಾಯುವ 2 ವರ್ಷದಿಂದ ಅವರಿಗೆ ಡಯಾಲಿಸಿಸ್ ಸಹ ಮಾಡಿಸಲಾಗಿತ್ತು ಎಂದರೆ ಸರಿ.

19. ನನ್ನ ತಂದೆಯವರು ಬದುಕಿದ್ದಾಗ 1 ನೇ ಪ್ರತಿವಾದಿಯವರು ಮಠದ ಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದರು. ನನ್ನ ತಂದೆಯವರನ್ನು ಡಯಾಲಿಸಿಸ್ ಗಾಗಿ ಕರೆದುಕೊಂಡು ಹೋಗಿ ಬರುವುದನ್ನು 2 ನೇ ಪ್ರತಿವಾದಿಯವರು ಮಾಡುತ್ತಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರ ಜೊತೆ ನನ್ನ ಅಕ್ಕಂದಿರು, ಅಕ್ಕಂದಿರ ಮಕ್ಕಳು ಮತ್ತು 1 ನೇ ಪ್ರತಿವಾದಿಯವರು ಕರೆದುಕೊಂಡು ಹೋಗಿ ಬರುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಅಕ್ಕಂದಿರು ಮತ್ತು ಅವರ ಮಕ್ಕಳು ನೆಲಮಹಡಿಯಲ್ಲಿ ತಂದೆಯೊಂದಿಗೆ ವಾಸಿಸುತ್ತಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಆ ಮನೆಯ ಮೊದಲನೆ ಮಹಡಿಯಲ್ಲಿ ವಾಸಿಸುತ್ತಿದ್ದರು ಎಂದು ನುಡಿಯುತ್ತಾರೆ.

20. ನನ್ನ ತಂದೆಯವರು 2017 ರಲ್ಲಿ ಮೃತ ಪಟ್ಟಿರುತ್ತಾರೆ. ಅವರ ಮರಣದ ನಂತರ 1 ನೇ ಪ್ರತಿವಾದಿಯವರು ನಮ್ಮ ಜೊತೆ ನೆಲಮಹಡಿಯಲ್ಲಿ ವಾಸಿಸಲು ಪ್ರಾರಂಭಿಸಿದ್ದರು ಎಂದರೆ ಸರಿ.

(ಮುಂದುವರಿದ ಪಾಟೀಸವಾಲನ್ನು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು).

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು,**

(ಮಮ್ತಾಜ್)
**9** ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು,
**ಬೆಂಗಳೂರು.**